ಶ್ರೀ ಜೆ.ಹೆಚ್. ಪಟೇಲ್ : ಗೋಕಾಕ್ ತಾಲ್ಲೂಕಿನ ಮೂಡಲಗಿಯಲ್ಲಿ 100 ಕೆ.ವಿ. ವಿದ್ಯುತ್ ವಿತರಣಾ ಉಪಕೇಂದ್ರ ಮಂಜೂರಾಗಿದ್ದು ಅದರ ಕಾಮಗಾರಿಗಳು ಪ್ರಗತಿಯಲ್ಲಿದೆ. ನಿರ್ಮಾಣ ಕಾರ್ಯಕ್ಕೆ ಬೇಕಾಗುವ ಎಲ್ಲಾ ಉಪಕರಣಗಳನ್ನು ಮತ್ತು ಇತರೇ ಸಾಮಗ್ರಿಗಳನ್ನೂ ಸಹ ಸರಬರಾಜು ಮಾಡಲಾಗಿದೆ.

ಶ್ರೀ ವಿ.ಎಸ್. ಕೌಜಲಗಿ : ನೀವು ಯಾವ ಯಾವ ಸಾಮಗ್ರಿಗಳನ್ನು ಒದಗಿಸಿದ್ದೀರಿ, ಇನ್ನು ಒದಗಿಸಬೇಕಾದಂತಹ ಸಾಮಗ್ರಿಗಳು ಏನು?

ಶ್ರೀ ಜೆ.ಹೆಚ್. ಪಟೇಲ್ : ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾರ್ಯವನ್ನು ಮಾರ್ಚ್ 96 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಉಪಕೇಂದ್ರ ನಿರ್ಮಾಣ ಮಾಡುವುದಕ್ಕೆ ಬೇಕಾಗುವ ಕಂಬಗಳು, ವೈಯರ್, ಟ್ರಾನ್ಸ್‌ಫಾರ್ಮರ್ ಇತ್ಯಾದಿ ಸರಬರಾಜು ಮಾಡಿದ್ದೇವೆ.

ಶ್ರೀ ವಿ.ಎಸ್. ಕೌಜಲಗಿ : ನಿರ್ಮಾಣ ಕಾರ್ಯ ಮುಗಿಯುತ್ತಾ ಬಂದಿದೆ. ಅದಕ್ಕೆ ಬೇಕಾಗುವ ಟ್ರಾನ್ಸ್‌ಫಾರ್ಮರ್ ಕೊಟ್ಟಿಲ್ಲ. ಕಳೆದ 6 ತಿಂಗಳಿಂದ ಹಾಗೆಯೇ ಬಿದ್ದಿದೆ. ಇವರು ಮಾರ್ಚ್ 96ರೊಳಗೆ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ ಅಂದರೆ ಇನ್ನು ಒಂದು ವರ್ಷ ಕಾಯಬೇಕೇ? ವೋಲ್ಟೇಜ್ ಡ್ರಾಪ್‌ನಿಂದಾಗಿ ಎಲ್ಲಾ ಟ್ರಾನ್ಸ್‌ಫಾರ್ಮರ್ ಸುಟ್ಟುಹೋಗುತ್ತಿವೆ. ಆದುದರಿಂದ ತೀವ್ರವಾಗಿ ಇನ್ನು 2-3 ತಿಂಗಳಲ್ಲಿ ಟ್ರಾನ್ಸ್‌ಫಾರ್ಮರ್ ಕಳುಹಿಸಿಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಟ್ರಾನ್ಸ್‌ಫಾರ್ಮರನ್ನು ಕಳುಹಿಸಿಕೊಡಲಾಗುತ್ತದೆ. ನಾವು ಮಾರ್ಚ್ ಒಳಗೆ ಎಂದರೆ, ಅದಕ್ಕಿಂತ ಮುಂಚೆ ಆಗುವುದಿಲ್ಲವೆಂದರ್ಥವಲ್ಲ. ಮಾರ್ಚ್ 96ರೊಳಗೆ ಮಾಡುತ್ತೇವೆ.

ಬೀರೂರು ಕ್ಷೇತ್ರದಲ್ಲಿ ಕೊಳವೆ ಬಾವಿಗಳ ಸಂಖ್ಯೆ

954 - ಶ್ರೀ ಎನ್.ಆರ್. ಲಕ್ಷ್ಮಯ್ಯ (ಬೀರೂರು ಕ್ಷೇತ್ರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1986-87, 87-88 ಮತ್ತು 88-89ನೇ ಸಾಲುಗಳಲ್ಲಿ ಕೊರೆಸಿದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಆ) ಕಳೆದ ಮೂರು ವರ್ಷಗಳಲ್ಲಿ ಬೀರೂರು ಕ್ಷೇತ್ರದಲ್ಲಿ ಕೊರೆಸಲಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖಾ ಸಚಿವರು) :

ಅ) ರಾಜ್ಯದಲ್ಲಿ 1986-87, 87-88 ಮತ್ತು 88-89ನೇ ಸಾಲುಗಳಲ್ಲಿ ಕೊರೆಸಿದ ಕೊಳವೆ ಬಾವಿಗಳ ಸಂಖ್ಯೆ ಕೆಳಗಿನಂತಿರುತ್ತದೆ.

1986-87	:	8534
1987-88	:	5240
1988-89	:	4375

ಆ) ಬೀರೂರು ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊರೆಸಿದ ಕೊಳವೆ ಬಾವಿಗಳ ಸಂಖ್ಯೆ ಕೆಳಗಿನಂತಿರುತ್ತದೆ.

1992-93	:	18

1993-94 : 23

1994-95 : 19

ಶ್ರೀ ಎಸ್.ಆರ್. ಲಕ್ಷ್ಮಯ್ಯ : ನಾನು ಕೇಳಿರತಕ್ಕಂತಹ ಪ್ರಶ್ನೆಗೆ ಬೇಕಾದಂಥ ಮಾಹಿತಿ ಕೊಟ್ಟಿಲ್ಲ, ಕೊಟ್ಟಿರತಕ್ಕಂಥ ಉತ್ತರ ತಪ್ಪಾಗಿದೆ. ನಾನು ಬೀರೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿದ್ದೇನೆ. ಅವರು ರಾಜ್ಯಕ್ಕೆ ಸಂಬಂಧಪಟ್ಟಂಥೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಅವರು ಪ್ರಶ್ನೆ ಕೇಳುವಾಗ 86-87, 87-88, 88-89ನೇ ಸಾಲಿನಲ್ಲಿ ಕೊರೆಸ್ಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಶ್ರೀ ಲಕ್ಷ್ಮಯ್ಯ ಶಾಸಕರಾಗಿದ್ದಂತಹ ಸಮಯದಲ್ಲಿ ಬೀರೂರು ಕ್ಷೇತ್ರಕ್ಕೆ 86-87ರಲ್ಲ 53 ಕೊಳವೆ ಬಾವಿಗಳು, 87-88ರಲ್ಲಿ 14 ಕೊಳವೆ ಬಾವಿಗಳು, 88-89ರಲ್ಲಿ 10 ಕೊಳವೆ ಬಾವಿಗಳು ಕೊರೆಯಲ್ಪಟ್ಟಿವೆ. ಅದೇ ರೀತಿ ಕಳೆದ ಮೂರು ವರ್ಷಗಳಲ್ಲಿ ಬೀರೂರು ಕ್ಷೇತ್ರಕ್ಕೆ 92-93ರಲ್ಲಿ 18, 93-94ರಲ್ಲಿ 23 ಮತ್ತು 94-95ನೇ ಸಾಲಿಗೆ 19 ಈ ರೀತಿ ಅವರ ಕಾಲದಲ್ಲಿ ಹೆಚ್ಚು ಕೊಳವೆ ಬಾವಿಗಳನ್ನು ಕೊರೆಯಲ್ಪಟ್ಟಿವೆ.

ಅಧ್ಯಕ್ಷರು : ಶ್ರೀ ವಡ್ಡರ್‌ರವರೇ, ತಮ್ಮ ಚುಕ್ಕೆ ಪ್ರಶ್ನೆ ಸಂಖ್ಯೆ : 879ಯನ್ನು ಅನಂತರ ತೆಗೆದುಕೊಳ್ಳುತ್ತೇನೆ.

ಮೈಸೂರು ನಗರದಲ್ಲಿ ವಿದ್ಯುಚ್ಛಕ್ತಿಯ ಅಭಾವ

847 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ವಿದ್ಯುಚ್ಛಕ್ತಿ ಅಭಾವವಿರುವುದು ನಿಜವೇ? ಹಾಗಿದ್ದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿರುವುದು ನಿಜವೇ?

ಆ) ಮೈಸೂರಿನ ವಿವಿಧ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇದ್ದು, ಇದಕ್ಕೆ ಕಾರಣ ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ಎಂಬುದು ನಿಜವೇ?

ಇ) ಹಾಗಿದ್ದಲ್ಲಿ ಈ ವಿಷಯಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಮೈಸೂರಿನ ವಿವಿಧ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆಗೆ ಕಾರಣ ಇಡೀ ವಿದ್ಯುತ್ ವ್ಯವಸ್ಥೆಯಲ್ಲೇ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿರುವುದು.

ಇ) ಮೈಸೂರಿನ ಹೂಟಗಳ್ಳಿಯಲ್ಲಿರುವ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಓವರ್‌ಲೋಡ್ ಆಗುವಿಕೆಯನ್ನು ತಪ್ಪಿಸಲು ಮಂಡ್ಯ ಜಿಲ್ಲೆಯ ಹೆಚ್ಚಿನ ಪ್ರದೇಶಗಳಿಗೆ ಟಿ.ಕೆ. ಹಳ್ಳಿಯಲ್ಲಿರುವ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲು ಟಿ.ಕೆ. ಹಳ್ಳಿಯಿಂದ ಮಂಡ್ಯಕ್ಕೆ 66 ಕೆವಿ ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವು ಪೂರ್ಣಗೊಂಡ ನಂತರ ಮಂಡ್ಯ ಜಿಲ್ಲೆಯ ಹೆಚ್ಚಿನ ಪ್ರದೇಶಗಳಿಗೆ ಮೈಸೂರಿನ ಹೂಟಗಳ್ಳಿಯ 220ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವುದನ್ನು ತಪ್ಪಿಸಿ, ಟಿ.ಕೆ. ಹಳ್ಳಿಯ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುವುದು. ಇದರಿಂದಾಗಿ ಮೈಸೂರಿನ ಹೂಟಗಳ್ಳಿಯ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಲೋಡ್ ಬಹಳಷ್ಟು ಪ್ರಮಾಣದಲ್ಲಿ ಕಡಿಮೆಗೊಂಡು ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುವುದು. ಟಿ.ಕೆ.